ಮೈಸೂರ ಗೆಜಿಟ.

ನಂ. 19 ಸರ್ಕಾರದಿಂದ ಫಾಯಿಸ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಮೇ ತಾ|| 10, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಡಿಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಟೇರಿಯವರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಜೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಡಿಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 10ನೇ ಏಪ್ರೆಲ್ 1884.

ನಂ. 8.—ಬೆಂಗಳೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ಫಾರೆಸ್ಟುಗಳ ಚಕ್ಕು ಬಂದಿಗಳು, ತಿದ್ದುಪಾಟಾದ 1878ನೇ ಇಸವಿ ಫಾರೆಸ್ಟು ರೂಲ್ಸ್ 9ನೇ ಸೆಕ್ಷ್ಷ ಅನುಸಾರಿಸಿ, ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಹುಲಿಯೂರು ದುರ್ಗದ ಫಾರೆಸ್ಟು.

ಹುಲಿಯೂರು ದುರ್ಗದ ಫಾರೆಸ್ಟು (1) ಉಜನಿ (2) ಯಿಪ್ಪಾಡಿ ಯೆಂಬದಾಗಿ ಕರೆಯಲ್ಪಟ್ಟ ಯರಡು ತಾಕುಗಳಾಗಿವೆ. ಇವುಗಳ ಕರಾವ್ ಮಾಡಲ್ಪಟ್ಟ ಗಂಟರಯವರ 22 ಗಜಿಗಳುಳ್ಳ 1 ಸಂಕಲಿ ಅಗಲದ ಡಿಮಾರ್ಕೇಷ್ಷ ಲೈನಿಂದ ಹದ್ದುಪಡಿಸಲ್ಪಟ್ಟಿರುತ್ತೆ.

1ನೇ ಉಜನಿ ತಾಕಿನ ಸುತ್ತಲೂ ಯಿರತಕ್ಕ ಈ ಲೈನಿನ ಫಾಸಲೆಯು 25 ಮೈಲಿ 5 ಫರ್‌ಲಾಂಗುಗಳು ಯಿರುತ್ತೆ. ಈ ಲೈನಲ್ಲಿ ಕೊನೆವರಿವಿಗೂ, ಭೂಮಿ ಮೇಲ್‌ಭಾಗದಲ್ಲಿ 5 ಅಡಿಯತ್ತರ ವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ವಂದು ಅಡಿ ಎತ್ತರವುಳ್ಳ ಚಿಕ್ಕ ಫರ್‌ಲಾಂಗ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿರುತ್ತೆ. ಮೈಲಿ ಕಲ್ಲುಗಳ ಸಂಖೆಯು ಹುಲಿಯೂರ್ ದುರ್ಗದ ಬಳಿಯಣ ವಡ್ಡರ ಕಲ್ಲಿನಲ್ಲಿ ಆರಂಭಿಸಿ ಕ್ರಮಶಃ ಹಾಕಿರುತ್ತೆ, ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೂ ಕ್ರಮವಾಗಿ ಸಂಖೆ ಹಾಕಲ್ಪಟ್ಟಿರುತ್ತೆ. ಯಡಪಾರಶ್ವದಿಂದ ಬಲಪಾರಶ್ವಕ್ಕೆ ಹೋಗಲು, ಈ ತಾಕಿನ ಡಿಮಾರ್ಕೇಷನ್ ಲೈನಿನ ಯಡಭಾಗಕ್ಕೆ ಇದರಡೀ ಕಂಡ ಗ್ರಾಮಗಳಿರುತ್ತೆ:—

ಫಾರೆಸ್ಟಿನ ವುತ್ತರಕ್ಕೆ.

1 ಕಿಂಗೋಹಳ್ಳಿ
2 ಮುತ್ತೇನಹಳ್ಳಿ (ಕಾಯಂಗುತ್ತಾ ಗ್ರಾಮಗಳು)
3 ದೀಪಾಮುದಿಕೆರೆ
4 ದಿವಾಪಟ್ಣ (ಕಾಯಂಗುತ್ತಾ)
5 ಬೆಂಬಕೆಕಲ್ಲು
6 ಅನಗರಹಳ್ಳಿ
7 ಹುಲಿಕಟ್ಟೆ
8 ಕೆಂಚಕೆನಹಳ್ಳಿ
9 ವುಂಡಲಗೆರೆ
10 ತಾವರೇಕೆರೆ

ಫಾರೆಸ್ಟಿನ ಪೂರ್ವದಿಕ್ಕಿಗೆ.

1 ಯಿರಪ್ಪನಂದ)

ಫಾರೆಸ್ಟಿನ ದಕ್ಷಿಣದಿಕ್ಕಿಗೆ.

1 ಕಾಚಹಳ್ಳಿ
2 ಯಲ್ಲೆಕಾಡ್ಲು
3 ಪೇವನಂದ)
4 ವೂಜನಿ
5 ಹಿತ್ತಲಪುರ
6 ಹೊನ್ನಮಾಚೇಹಳ್ಳಿ (ಇನಾಂಗ್ರಾಮೆ)

ಫಾರೆಸ್ಟಿನ ಪಶ್ಚಿಮಕ್ಕೆ.

1 ಹುಲಿಯೂರುದುರ್ಗ
2 ಹೊಸಹಳ್ಳಿ

ಈ ತಾಕಿನಲ್ಲಿ ಕಾಡಜೋರನಹಳ್ಳಿ ಗ್ರಾಮ ಆವರಣ ದೇಖೀಲ್ ಶೇರಿರುತ್ತೆ.
ಈ ಆವರಣವು ಸಾಧಾರಣವಾದ 6 ಅಡಿ ಅಗಲದ ಡಿಮಾರ್ಕೇಷನ್ ಲೈನಿಂದ ಗುರ್ತು ಮಾಡಲ್ಪಟ್ಟಿರುತ್ತೆ.

(2)ನೇ ತಾಕಾದ ಯಿಪ್ಪಾಡಿ ಸುತ್ತಲೂ ಯಿರತಕ್ಕ ಲೈನು 15 ಮೈಲಿ 7 ಫರಲಾಂಗ್ ಫಾಸಲೆ ಯಿರುತ್ತೆ. ಇದರಲ್ಲಿಯೂ ಕೊನೇವರಿಗೂ ಮೈಲಿ ವ ಫರಲಾಂಗ್ ಕಲ್ಲುಗಳಿಂದ ಗುರ್ತು ಮಾಡಲ್ಪಟ್ಟಿದೆ, ಮೈಲಿ ಕಲ್ಲುಗಳ ಸಂಖೆಯು, ಯಿಪ್ಪಾಡಿಬಳಿಯಣ ಬಾಲದೊರೆ ಕಲ್ಲಿನಲ್ಲಿ ಆರಂಭಿಸಿ ಕ್ರಮಶಃ ಹಾಕಲ್ಪಡುವದು, ಫರಲಾಂಗ್ ಕಲ್ಲುಗಳ ಸಂಖೆಯುದಾ ಪ್ರತಿ ಮೈಲಿಯೊಳಗೆ ಕ್ರಮಶಃ ಹಾಕಲ್ಪಡುವದು, ಯಡಪಾರಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು ಈ ತಾಕಿನ ಡಿಮಾರಕೇರ್ಷ ಲೈನಿನ ಯಡಭಾಗಕ್ಕೆ ಇದರಡಿ ಕಂಡ ಗ್ರಾಮಗಳಿರುತ್ತವೆ:—

ಫಾರೆಸ್ಟಿನ ಉತ್ತರಕ್ಕೆ.

1 ಯಿಪ್ಪಾಡಿ
2 ನಾಗನಹಳ್ಳಿ

ಫಾರೆಸ್ಟಿನ ಪೂರ್ವಕ್ಕೆ.

1 ವರತೀಹಳ್ಳಿ
2 ಬಿಪರಹಳ್ಳಿ

ಫಾರೆಸ್ಟಿನ ದಕ್ಷಿಣಕ್ಕೆ.

1 ನೀಲನಂದ)
2 ಹೀರೋಹಳ್ಳಿ
3 ಚೊಂಡನಕುಪ್ಪೆ
4 ಗುಡೆತಿಪ್ಪನೆಂದ್ರ.

ಫಾರೆಸ್ಟಿನ ಪಶ್ಚಿಮಕ್ಕೆ.

1 ನಗತೆಹಳಿ
2 ಮದ್ದಪ್ಪನಹಳ್ಳಿ.

293

ಸೆರ್ವದುರ್ಗದ ಫಾರೆಸ್ಟು.

ಮೊಗಡಿತಾಲ್ಲೂಕಿನಲ್ಲಿರತಕ್ಕ ಸೆರ್ವದುರ್ಗದ ಫಾರೆಸ್ಟು (1) ಅರಕಾವತಿ (2) ಸಿದ್ದೇದೇವರಬಟ್ಟು ಯಂಬ ಯರಡು ತಾಕುಗಳಾಗಿವೆ, ಇವುಗಳು 22ಗಜಗಳುಳ್ಳ ತರಾವ್ ಮಾಡಲ್ಪಟ್ಟ ಗಂಟುರಯವರ 1 ಸಂಕಲಿ ಅಗಲದ ಡಿಮಾರ್ಕೇಷ್ಟ ಲೈನಿಂದ ಸುತ್ತಲೂ ಹದ್ದುಪಡಿಸಲ್ಪಟ್ಟಿರುತ್ತೆ. ಅರಕಾವತಿ ತಾಕಿನ ಸುತ್ತಲೂ ಇರತಕ್ಕ ಈ ಲೈನಿನ ಫಾಸಲೆಯು 22 ಮೈಲಿ 3 ಫರ್‌ಲಾಂಗು, ಈ ಲೈನಿನಲ್ಲಿ ಕೊನೆವರಿವಿಗೂ, ಭೂಮಿ ಮೇಲ್‌ಭಾಗದಲ್ಲಿ 5 ಅಡಿಯತ್ತರವುಳ್ಳ ದೊಡ್ಡ ಮೈಲಿಕಲ್ಲುಗಳಿಂದಲೂ ವಂದು ಅಡಿ ಯತ್ತರವುಳ್ಳ ಫರ್‌ಲಾಂಗ್ ಕಲ್ಲುಗಳಿಂದಲೂ ಗುರ್ತುಮಾಡಲ್ಪಟ್ಟಿರುತ್ತೆ. ಮೈಲಿಕಲ್ಲುಗಳ ಸಂಖೆಯು ನಾಯಕನಪಾಳ್ಯದ ಬಳಿಯಣ ಬಸವನ ಕಲ್ಲಿನಲ್ಲಿ ಆರಂಭಿಸಿ ಕ್ರಮಶಃ ಹಾಕಿರುತ್ತೆ; ಫರ್‌ಲಾಂಗ್ ಕಲ್ಲುಗಳು ಸುದಾ ಪ್ರತಿ ಮೈಲಿವಳಗೆ ಕ್ರಮಶಃ ನಂಬರು ಹಾಕಲ್ಪಟ್ಟಿರುತ್ತೆ. ಯಡ ಪಾರಶ್ವದಿಂದ ಬಲಪಾರಶ್ವಕ್ಕೆ ಹೋಗಲು ಡಿಮಾರ್ಕೇಷ್ಟ ಲೈನಿನ ಯಡಪಾರಶ್ವಕ್ಕೆ ಇದರಡಿಕಂಡ ಗ್ರಾಮಗಳಿರುತ್ತವೆ.

ಫಾರೆಸ್ಟಿನ ಉತ್ತರದಿಕ್ಕಿಗೆ.

1 ತಗಚಿಕುಪ್ಪೆ
2 ಬಾಜೇನಹಳ್ಳಿ
3 ಅಡಕೆಮಾರನಹಳ್ಳಿ
4 ಕಲ್ಲೂರು
5 ವೀರಾಪುರ

ಫಾರೆಸ್ಟಿನ ಪೂರ್ವದಿಕ್ಕಿಗೆ.

1 ದಬ್ಬಗುಳಿ
2 ಮಂಚನಬೆಲೆ
3 ಹಾಗಲಹಳ್ಳಿ

ಫಾರೆಸ್ಟಿನ ದಕ್ಷಿಣದಿಕ್ಕಿಗೆ.

1 ದೊಡ್ಡಸೂಲಕೆರೆ

ಫಾರೆಸ್ಟಿನ ಪಶ್ಚಿಮದಿಕ್ಕಿಗೆ.

1 ಮತ್ತಾ
2 ನಾಯಿಕನಪಾಳ್ಯ
3 ಕರಲಮಂಗಲ
4 ಗುಡ್ಡಹಳ್ಳಿ
5 ಪೋಲೋಹಳ್ಳಿ (ಜೋಡಿ)
6 ಮರಲಗೊಂಡ್ಲ

ಈ ತಾಕಿನಲ್ಲಿ ನೆಲಪಟ್ಟ ಗ್ರಾಮ ಆವರಣ ದೇಖೀಲ್ ಕೇರಿರುತ್ತೆ. ಈ ಆವರಣವು 6 ಅಡಿ ಅಗಲದ ಸಾಧಾರಣವಾಡ ಡಿಮಾರ್ಕೇಷ್ಟ ಲೈನ್ನಿಂದ ಗುರ್ತು ಮಾಡಲ್ಪಟ್ಟಿರುತ್ತೆ.

(2)ನೇ ಸಿದ್ದೇದೇವರ ಬೆಟ್ಟವೆಂಬ ತಾಕಿನಸುತ್ತಲೂ ಇರತಕ್ಕ ಲೈನು 20 ಮೈಲಿ 3 ಫರ್‌ಲಾಂಗುಗಳ ಫಾಸಲೆಯಿರುತ್ತೆ. ಈ ಲೈನಿನಲ್ಲಿಯೂ ಕೊನೆವರಿವಿಗೂ ಮೈಲಿ, ವ ಫರ್‌ಲಾಂಗು ಕಲ್ಲುಗಳಿಂದ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳ ಸಂಖೆಯು, ನಾಗಮಂಗ ಲದ ಬಳಿಯಣ ಲಾಲದರೇಹಳ್ಳದಿಂದ ಆರಂಭಿಸಿ ಕ್ರಮಶಃ ಹಾಕಲ್ಪಟ್ಟಿರುತ್ತೆ. ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೂ ನಂಬರು ಹಾಕಲ್ಪಟ್ಟಿರುತ್ತೆ. ಯಡಪಾರಶ್ವದಿಂದ ಬಲಪಾರಶ್ವಕ್ಕೆ ಹೋಗಲು ಈ ತಾಕಿನ ಡಿಮಾರ್ಕೇಷ್ಟ ಲೈನಿನ ಯಡಭಾಗಕ್ಕೆ ಇದರಡೀ ಕಂಡ ಗ್ರಾಮಗಳಿರುತ್ತೆ:—

ಫಾರೆಸ್ಟಿನ ಉತ್ತರಕ್ಕೆ.

1 ಬಸವನಹಳ್ಳಿ (ಕಾಯಂಗುತ್ತಾ ಪಾಳು ಜಮೀನು)
2 ಕರಲಹಳ್ಳಿ (ಕಾಯಂಗುತ್ತಾ ಬೇಚಿರಾಕ್)

ಫಾರೆಸ್ಟಿನ ಪೂರ್ವದಿಕ್ಕಿಗೆ.

1 ನಾಗಮಂಗಲ
2 ರಂಗಾಚಾರಿಪಾಳ್ಯ (ಕಾಯಂಗುತ್ತಾ ಬೇಚಿರಾಕ್)
3 ಹಂಚಿಕುಪ್ಪೆ
4 ಹಂಣಿಕಾರನಹಳ್ಳಿ
5 ಅತ್ತಿಮ್ಮಗೆರೆ

ಫಾರೆಸ್ಟಿನ ದಕ್ಷಿಣಕ್ಕೆ.

1 ಗಾಣಕಲ್ಲು
2 ಅಜ್ಜನಹಳ್ಳಿ
3 ಗುಜ್ಜಹಳ್ಳಿ (ಕಾಯಂಗುತ್ತಾ ಗ್ರಾಮ)

ಫಾರೆಸ್ಟಿನ ಪಶ್ಚಿಮಕ್ಕೆ.

1 ನೇರಲವಾಡಿ
2 ಲಕ್ಕಸಂದ್ರ
3 ಹೆಗ್ಗೆಹಳ್ಳಿ
4 ಜೋಳೇನಹಳ್ಳಿ (ಜೋಡಿ ಗ್ರಾಮ)
5 ಕಂಬುದೇವನಹಳ್ಳಿ
6 ಮೂಡಬಾಳು
7 ಪೂರಾ

ಈ ತಾಕಿನ ವಳಗೆ ಜೋಡಿ ಕಂದಹಳ್ಳಿ ಗ್ರಾಮ ಆವರಣ ದೇಖಿಲ್ ಇರುತ್ತೆ. ಈ ಆವರಣವು ಸಾಧಾರಣವಾದ 6 ಅಡಿ ಅಗಲವುಳ್ಳ ಡಿಮಾರ್ಕೇಷ್ಟ್ ಲೈನಿನಿಂದ ಗುರ್ತು ಮಾಡಲ್ಪಟ್ಟಿರುತ್ತೆ.

ಮೂಕಳಿ ಫಾರೆಸ್ಟು.

ಮೂಕಳಿ ಫಾರೆಸ್ಟು (1) ಏ೯ ಮೂಕಳಿ (2) ಬೆರಲುಗುಡ್ಡೆ ಯೆಂಬ ಎರಡು ತಾಕುಗಳಾಗಿವೆ, ಇದು ಕಾವೇ ಮಾಡಲ್ಪಟ್ಟ ಗಂಟೆರ್ ಯವರ ವಂದು ಸಂಕಲಿ ಅಂದರೆ 22 ಗಜ ಅಗಲವುಳ್ಳ ಭಿನ್ನವಾದ ಡಿಮಾರ್ಕೇಷ್ಟ್ ಲೈನಿನಿಂದ ಹದ್ದುಪಡಿಸಲ್ಪಟ್ಟಿರುತ್ತೆ.

ಮೊದಲನೇ ತಾಕ್ ಲೈನಿನ ಫಾಸಲೆಯು 22 ಮೈಲಿ 4 ಫರ್ ಲಾಂಗುಗಳು; 2ನೇದರ ಫಾಸಲೆಯು 2 ಮೈಲಿ 6 ಫರಲಾಂಗುಗಳು; ಇದರಲ್ಲಿ ಕೊನೆವರಿವಿಗೂ ಭೂಮಿ ಮೇಲೆ 5 ಅಡಿ ಯತ್ತರವುಳ್ಳ ಮೊಡ್ಡ ಮೈಲಿ ಕಲ್ಲುಗಳಿಂದಲೂ ವೆಂದು ಅಡಿ ಯತ್ತರವುಳ್ಳ ಫರಲಾಂಗು ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿರುತ್ತೆ. ಮೊದಲನೇ ಲೈನಿನ ಮೈಲಿ ಕಲ್ಲುಗಳು ಗಂಗವಾಡಿ ನದಿಗೆ ಸ್ವಲ್ಪ ಬಲಭಾಗಕ್ಕಿರುವ ಕ್ಯಾಸಾಪುರದ ಬಳಿಯ ಬಂಡೆಯಿಂದ ಕ್ರಮವಾಗಿ ಸಂಖೆ ಹಾಕಲ್ಪಟ್ಟಿರುತ್ತೆ. ಎರಡನೇ ಲೈನಿನ ಮೈಲಿ ಕಲ್ಲುಗಳು ಕದರಮಂಗಲದ ಕೆರೆಕಟ್ಟೆಪಟ್ಟಿ ಮಾಭಾಗದ ಬಂಡೆಯಿಂದ ಸಂಖೆ ಹಾಕಲ್ಪಟ್ಟಿರುತ್ತೆ; ಫರಲಾಂಗು ಕಲ್ಲುಗಳು ಆಯಾಯ ಮೈಲಿ ವಳಗೆ ಸಂಖೆ ಹಾಕಲ್ಪಡುವವು. (ಗಡಿಯಾರದ ಮುಳ್ಳುಗಳ ಹಾಗೆ) ಯಡಪಾರ್ಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು ಡಿಮಾರ್ಕೇಷ್ಟ್ ಲೈನಿನ ಯಡಭಾಗಕ್ಕೆ ಇದರಡಿ ಕಂಡ ಗ್ರಾಮಗಳು ಯೂ ಗುರ್ತಾದ ಜಿಮಿನುಗಳು ಇರುತ್ತವೆ.

1ನೇ ತಾಕಿಗೆ.

ಫಾರೆಸ್ಟಿನ ವುತ್ತರ ದಿಕ್ಕಿಗೆ.

1 ದ್ಯಾವಸಂದ್ರ
2 ಯಲೇಕಡಕಲ್
3 ಕಾಚಕಹಳ್ಳಿ
4 ಬ್ಯಾಡರಹಳ್ಳಿ
5 ವಡ್ಡನತೋರೆ ಅಥವಾ ಕೋತಿಹಳ್ಳ
6 ವಿರಪಸಂದ್ರ
7 ಹೊಂಬೇಗವುಡನದೊಡ್ಡಿ

ಫಾರೆಸ್ಟಿನ ಪೂರ್ವಕ್ಕೆ.

1 ಚಿಕ್ಕ ಗಂಗವಾಡಿ
2 ದೊಡ್ಡ ಗಂಗವಾಡಿ
3 ಗಂಗವಾಡಿತೋರೆ
4 ಆನಮಾನಹಳ್ಳಿ ಸರ್ವಮಾನ್ಯ ಜಂಗಲ್
5 ಕ್ಯಾಸಾಪುರ
6 ಚ್ಯಾಮನಹಳ್ಳಿ
7 ಡಿಟೋ ಸರ್ವ ಮಾನ್ಯ ಜಂಗಲ್

ಫಾರೆಸ್ಟಿನ ದಕ್ಷಿಣಕ್ಕೆ.

1 ದಕವಾರ
2 ಚಿಕ್ಕೇನಹಳ್ಳಿ
3 ನಾಗವಾರ
4 ಕೆಲಗೆರೆ
5 ಹಾರುವಳ್ಳಿದೊಡ್ಡಿ
6 ಬೇವೂರು
7 ಭೈರನಾಯಕನಹಳ್ಳಿ
8 ಅಮ್ಮಹಳ್ಳಿದೊಡ್ಡಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಕದರಮಂಗಲ
2 ಡಿಟೋ ಕೆರೆ
3 ಚಲಮನಂದ
4 ಶಿವನಹಳ್ಳಿ

ನಂಬರ್ 2ನೇ ತಾಕಿಗೆ.

ಫಾರೆಸ್ಟಿನ ಉತ್ತರಕ್ಕೆ.

1 ಚಲಮನಂದ
2 ತಲೆಬುಂಡೇಹಳ್ಳಿ

ಫಾರೆಸ್ಟಿನ ಪೂರ್ವಕ್ಕೆ.

1 ಕದರಮಂಗಲದ ಕೆರೆ.

ಫಾರೆಸ್ಟಿನ ದಕ್ಷಿಣಕ್ಕೆ.

1 ಡಿಟೋ ಗ್ರಾಮ

ಫಾರೆಸ್ಟಿನ ಪಶ್ಚಿಮಕ್ಕೆ.

1 ನಿಡಸಾಲೆ ಗ್ರಾಮದ ಕುರಚಕುಗಿಡ.

ಮೊದಲನೇ ತಾಕಿನಲ್ಲಿ, ಮೂಕಳಿ, ಹೊಸಹಳ್ಳಿ, ನಾಯಿದೊಲೆ ಗ್ರಾಮಗಳು ಆವರಣ ದೇಖಿಲ್ ಕೇರಿ ಇರುತ್ತೆ, ಇದರ ಸುತ್ತಲೂ 6 ಅಡಿ ಅಗಲದ ಸಾಧಾರಣ ಲೈನ್ ಹಾಕಿರುತ್ತೆ.

ಮಣ್ಣಗುಡ್ಡೆ ಫಾರೆಸ್ಟು.

ಮಣ್ಣಗುಡ್ಡೆ ಜಂಗಲಿಯು (1) ದೊಡ್ಡ ಮಣ್ಣಗುಡ್ಡೆ (2) ಚಿಕ್ಕ ಮಂಣುಗುಡ್ಡೆಯಂಬ ಎರಡು ತಾಕುಗಳಾಗಿರುತ್ತೆ, ಇದರಸುತ್ತಲೂ ಡೆರಾವ್ ಮಾಡಲ್ಪಟ್ಟ ಡೈರೆಕ್ಟರ್‌ಸಯವರ 22 ಗಜಗಳುಳ್ಳ ವೃಂದು ಸಂಕಲಿ ಅಗಲದ ಭಿನ್ನವಾದ ಡಿಮಾರ್ಕೇಷನ್ ಲೈನ್ ಇರುತ್ತೆ. ಮೊದಲನೇ ತಾಕಿನ ಲೈನಿನ ಫಾಸಲೆಯು 11 ಮೈಲಿಗಳು; 2ನೇ ತಾಕಿನ ಲೈನಿನ ಫಾಸಲೆಯು 10 ಮೈಲಿ, 6 ಫರಲಾಂಗು, 143 ಗಜಗಳಿರುತ್ತೆ. ಇದು ಕೊನೇವರಿಗೂ ಭೂಮಿ ಮೇಲೆ 5 ಅಡಿ ಯತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ 1 ಅಡಿ ಎತ್ತರವುಳ್ಳ ಸಂಣ ಫರಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೊದಲನೇ ತಾಕಿನ ಮೈಲಿ ಕಲ್ಲುಗಳು ಮೈಸೂರು ರಸ್ತೆಗೆ ಬಲಪಾರ್ಶ್ವದಲ್ಲಿ 33ನೇ ಮೈಲಿ ಬಳಿಯ "ಬಾಲ್ಲರೆ" ಯೆಂಬ ಬಂಡೆಯಿಂದ ಆರಂಭಿಸಿ ಕ್ರಮಿಕ ಸಂಖೆ ಹಾಕಲ್ಪಟ್ಟಿರುತ್ತೆ, ಯರಡನೇ ತಾಕಿನವು ಮೈಸೂರು ರಸ್ತೆ 34ನೇ ಮೈಲಿ ಬಳಿಯಣ ಲೆವಲ್ ಕ್ರಾಸಿಂಗ್ ಸ್ಥಳದ ಸಮೀಪ ಇರುವ ಗುಟ್ಟದಲ್ಲಿ ಆರಂಭಿಸಿರುತ್ತೆ; ಫರಲಾಂಗ್ ಕಲ್ಲುಗಳು ಆಯಾಯ ಮೈಲಿ ವಳಗೆ ಕ್ರಮಿಕ ನಂಬರು ಹಾಕಲ್ಪಟ್ಟಿವೆ, (ಫಡಿಯೂರದ ಮುಳ್ಳುಗಳೋಪಾದಿಯಲ್ಲಿ) ಯಡಪಾರ್ಶ್ವದಿಂದ ಬಲಪಾರ್ಶ್ವಕ್ಕೆ ಹೋಗಲು ಡಿಮಾರ್ಕೇಷನ್ ಲೈನಿನ ಎಡಭಾಗಕ್ಕೆ ಇದ್ದಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮೀನುಗಳು ಯಿರುತ್ತವೆ.

ನಂಬರ್ 1ನೇ ತಾಕಿಗೆ.

ಫಾರೆಸ್ಟಿನ ಉತ್ತರ ದಿಕ್ಕಿಗೆ.

1 ಕುರಬರಹಳ್ಳಿ
2 ಗೊಲ್ಲರದೊಡ್ಡಿ
3 ಚನ್ನೇನಹಳ್ಳಿ
4 ಭದ್ರೇಗೌಡನ ದೊಡ್ಡಿ

ಫಾರೆಸ್ಟಿನ ಪೂರ್ವಕ್ಕೆ.

1 ರಂಗರಾಯರದೊಡ್ಡಿ
2 ಅರ್ಚಿಗರಹಳ್ಳಿ
3 ರಾಮಣ್ಣನ ದೊಡ್ಡಿ
4 ಮೈಸೂರು ರಸ್ತೆ 31ನೇ ಮೈಲಿ ಮೊದಲು 33ನೇ ಮೈಲಿ ಕಲ್ಲು ವರಿಗೆ ದಕ್ಷಿಣ ದಿಕ್ಕಿಗೆ
5 ಶಿದ್ದೇಗವುಡನ ದೊಡ್ಡಿ

ಫಾರೆಸ್ಟಿನ ದಕ್ಷಿಣಕ್ಕೆ.

1 ವಂದಾರ ಕುಪ್ಪೆ ಕೆರೆ
2 ಪಳ್ಳಿದೊಡ್ಡಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಕನ್ನಮಂಗಲದ ಸರ್ವಮಾನ್ಯ ಜಿಂಗಲ್
2 ಡಣಾಯಿಕಪುರ

ನಂಬರ್ 2ನೇ ತಾಕಿಗೆ.

ಫಾರೆಸ್ಟಿನ ಉತ್ತರಕ್ಕೆ.

1 ಕುಂಭಾಪುರ
2 ರಾಮೇಗವ್ಡನ ಕಟ್ಟೆ

ಫಾರೆಸ್ಟಿನ ಪೂರ್ವಕ್ಕೆ.

1 ಅಂಜನಾಪುರ
2 ಗೊಲ್ಲರದೊಡ್ಡಿ
3 ಬ್ಯಾಲಕುಳಿ
4 ಡಿಟೋ ಹಳ್ಳ

ಫಾರೆಸ್ಟಿನ ದಕ್ಷಿಣಕ್ಕೆ.

1 ಹುಚ್ಚೇಗವ್ಡನ ದೊಡ್ಡಿ
2 ಬ್ರಹ್ಮಣ್ಯಪುರ
3 ತಿಮ್ಮಸಂದ್ರ
4 ವಡ್ಡರದೊಡ್ಡಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಬೇಚಿರಾಕ್ ವನಗನಹಳ್ಳಿ
2 ವಂದಾರಕುಪ್ಪೆ
3 ಮಂಚಟ್ಟಿಹಳ್ಳಿ
4 30 ಮತ್ತು 32ನೇ ಮೈಲಿ ಕಲ್ಲಿನ ಮಧ್ಯದ ರೈಲ್‌ರಸ್ತೆ

ಇದರಲ್ಲಿ ಆವರಣ ಯಾವದೂ ಸೇರಿ ಇಲ್ಲ.—

ಚಿಲ್ಕದದಿ ಮತ್ತು ಬಸವನ ಬೆಟ್ಟ ಫಾರೆಸ್ಟ್ಗಳು ಮಳತವಾಗಿ ಕಾವೇರಿ ಫಾರೆಸ್ಟ್ಗು.

ಕಾವೇರಿ ಫಾರೆಸ್ಟ್ಗು ವಂದೇ ತಾಕ್ ಆಗಿರುತ್ತೆ, ಇದರ ಸುತ್ತಲು 22 ಗಜಕ್ಕೆ ಸಮವಾದ ಕರಾವ್ ಮಾಡಲ್ಪಟ್ಟ ಗಂಟರ್ಸ್ ಯನರ ವಂದು ಸಂಕಲಿ ಅಗಲದ ಡಿವಾರ್ಕೇರ್ಷ ಲೈನ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಘಾಸಲೆಯು 47 ಮೈಲಿ, 5 ಫರಲಾಂಗ್, 132 ಗಜಗಳು ಇರುತ್ತೆ; ಈ ಲೈನಿನಲ್ಲಿ ಕೊನೇ ವರಿಗೂ ಭೂಮಿ ಮೇಲೆ 5 ಅಡಿ ಯತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ವಂದಡಿ ಎತ್ತರವುಳ್ಳ ಸಣ್ಣ ಫರಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳು ಭೂವಹಳ್ಳಿ ಕೆರೆಬಳಿಯ ರಸ್ತೆಯಲ್ಲಿ 0 ಗುರ್ತು ಮೊದಲು ಮಾಡಿ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ, ಫರಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೆ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ (ಘಡಿಯಾರದ ಮುಳ್ಳು ಗಳೋಪಾದಿಯಲ್ಲಿ) ಎಡಕಡೆಯಿಂದ ಬಲಕಡೆಗೆ ಹೋಗಲು, ಡಿವಾರ್ಕೇರ್ಷ ಲೈನಿನ ಎಡಭಾಗದಲ್ಲಿ ಇದರಡೀಕಂಡ ಗ್ರಾಮಗಳು ಯಾ ಮುಖ್ಯವಾದ ಜಮೀನುಗಳು ಇರುತ್ತವೆ.

ಫಾರೆಸ್ಟಿನ ಉತ್ತರಕ್ಕೆ.

1 ಗಾಣಾಳು
2 ಬ್ಯಾಡರಹಳ್ಳಿ
3 ಹಗಾದೂರು
4 ಬಸವಾಪುರ
5 ಗುಂಡಾಪುರ
6 ಕೆಂಪನದೊಡ್ಡಿ
7 ಹರಿಹರಾ
8 ಬೂವಹಳ್ಳಿ
9 ದುಂತೂರು
10 ನಾಯಿಕರಹಳ್ಳಿ
11 ದೊಡ್ಡಆಲಹಳ್ಳಿ
12 ಪೂಯ್ಯಂಬಳ್ಳಿ
13 ಹಳಗಳ್ಳಿ
14 ಶಿವನಹಳ್ಳಿ

ಫಾರೆಸ್ಟಿನ ಪೂರ್ವಕ್ಕೆ.

1 ಅರ್ಕಾವತಿ ನದಿ

ಫಾರೆಸ್ಟಿನ ದಕ್ಷಿಣಕ್ಕೆ.

1 ಕಾವೇರಿ ನದಿ

ಫಾರೆಸ್ಟಿನ ಪಶ್ಚಿಮಕ್ಕೆ.

1 ಶಿಂಷಾ ನದಿ

ಈ ಫಾರೆಸ್ಟಿನಲ್ಲಿ ಹುಲಿಯ, ಮಕಲುಂದ, ಬಿಲಂದವಾಡಿ, ಈರಸಂದ್ರ, ಹಗನೂರು, ಹೇರ್ಯ, ಕೊನಗುಂಡಿ, ನೋಲಗೇರಿ, ಬನವ ಹಳ್ಳಿ, ಸಾಂಬಾಪುರ, ಮುತತ್ತಿ ತಲವಾಡಿ, ಸೊಲಬ ಮತ್ತು ಮೆಣುಗರನ ಕಟ್ಟೆ. ಈ ಗ್ರಾಮಗಳು ಆವರಣ ದೇಖೀಲ್ ಸೇರಿ ಇದೆ. ಈ ಆವರಣಗಳು 6 ಅಡಿ ಅಗಲವುಳ್ಳ ಸಾಧಾರಣವಾದ ಡಿಮಾರ್ಕೇರ್ಷ ಲೈನಿನಿಂದ ಗುರ್ತು ಮಾಡಲ್ಪಟ್ಟಿವೆ.

ರಾಗಿಹಳ್ಳಿ ಫಾರೆಸ್ಟು.

ರಾಗಿಹಳ್ಳಿ ಫಾರೆಸ್ಟು ಬಂದೇ ತಾಕ್ ಆಗಿರುತ್ತೆ, ಇದರ ಸುತ್ತಲು 22 ಗಜಕ್ಕೆ ಸಮವಾದ ಕೆರಾವು ಮಾಡಲ್ಪಟ್ಟ ಗಂಟರ್ಸ್‌ಯವರ ಬಂದು ಸಂಕಲಿ ಅಗಲದ ಡಿಮಾರ್ಕೇರ್ಷ ಲೈನ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಫಾಸಲೆಯು 20 ಮೈಲಿ, 6 ಫರ್‌ಲಾಂಗ್, 192 ಗಜಗಳು ಇರುತ್ತೆ. ಈ ಲೈನಿನಲ್ಲಿ ಕೊನೆವರಿವಿಗೂ ಭೂಮಿ ಮೇಲೆ 5 ಅಡಿ ಎತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ಬಂದು ಅಡಿ ಎತ್ತರವುಳ್ಳ ಸಣ್ಣ ಫರ್‌ಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳು ದೊಡ್ಡಮ್ಮನಕೆರೆ ತೂಬಿನ ಸಮೀಪದ ಬಂಡೆ ಮೊದಲುಮಾಡಿ ಕ್ರಮಶಃ ಸಂಖೆಹಾಕಲ್ಪಟ್ಟಿರುತ್ತೆ, ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿಯೊಳಗೆ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ. ಎಡಕಡೆಯಿಂದ ಬಲಕಡೆಗೆ ಹೋಗಲು (ಫೆಡಿಯಾರದ ಮುಳ್ಳುಗಳೋಪಾದಿಯಲ್ಲಿ) ಡಿಮಾರ್ಕೇರ್ಷ ಲೈನಿನ ಎಡಭಾಗದಲ್ಲಿ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮೀರ್ಗಳು ಇರುತ್ತವೆ:—

ಫಾರೆಸ್ಟಿನ ಉತ್ತರಕ್ಕೆ.

1 ಭೂತಾನಹಳ್ಳಿ
2 ಬಂನೇರಗಟ್ಟಾ

ಫಾರೆಸ್ಟಿನ ಪೂರ್ವಕ್ಕೆ.

1 ಸಂಪಗೆಹಳ್ಳಿ
2 ಬೈರಪ್ಪನಹಳ್ಳಿ
3 ಕರಿಯಪ್ಪನಹಳ್ಳಿ
4 ಬುಕ್ಕಸಾಗರ
5 ಮಹಂತಲಿಂಗಾಪುರ
6 ರಾಗಹಳ್ಳಿ
7 ಶಿವನಹಳ್ಳಿ

ಫಾರೆಸ್ಟಿನ ದಕ್ಷಿಣಕ್ಕೆ.

1 ಕಂಸಾರಿಯಟ್ ಇಲಾಖಾ "ಕಾವಲಿನ" ಸರಹದ್ದು ಕಲ್ಲುಗಳು

ಫಾರೆಸ್ಟಿನ ಪಶ್ಚಿಮಕ್ಕೆ.

1 ಚಿಕ್ಕಮುಕ್ಕೊಡ್ಲು
2 ಹುಚ್ಚೀರೇಗವ್ವಡನಪಾಳ್ಯ
3 ತಟ್ಟಗುಪ್ಪೆ
4 ಥರಳು
5 ಗುಳಿಕಮಲೆ

ಬಿಳಿಕಲ್ ಫಾರೆಸ್ಟು.

ಬಿಳಿಕಲ್ ಫಾರೆಸ್ಟು ಬಂದೇ ತಾಕ್ ಆಗಿರುತ್ತೆ, ಇದರ ಸುತ್ತಲು 22 ಗಜಕ್ಕೆ ಸಮವಾದ ಕೆರಾವು ಮಾಡಲ್ಪಟ್ಟ ಗಂಟರ್‌ಯವರ ಬಂದು ಸಂಕಲಿ ಅಗಲದ ಡಿಮಾರ್ಕೇರ್ಷ ಲೈನ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಫಾಸಲೆಯು 46 ಮೈಲಿ, 5 ಫರ್‌ಲಾಂಗ್ ಇರುತ್ತೆ. ಈ ಲೈನಿನಲ್ಲಿ ಕೊನೆವರಿವಿಗೂ ಭೂಮಿ ಮೇಲೆ 5 ಅಡಿ ಎತ್ತರವುಳ್ಳ ದೊಡ್ಡ ಮೈಲಿಕಲ್ಲುಗಳಿಂದಲೂ ಬಂದು ಅಡಿ ಎತ್ತರವುಳ್ಳ ಸಣ್ಣ ಫರ್‌ಲಾಂಗ್ ಕಲ್ಲುಗಳಿಂದಲೂ ಗುರ್ತುಮಾಡಲ್ಪಟ್ಟಿದೆ. ಮೈಲಿಕಲ್ಲುಗಳು ಸದರೀ ಲೈನು ಮತ್ತು ಮೆನಿಯಂಬಾಳದಿಂದ ಕಾರ್ಕಕೋಟೆಗೆ ಹೋಗುವ ರಸ್ತೆ [illegible] ಸೇರುವ ಸ್ಥಳದಲ್ಲಿ 0 ಗುರ್ತು ಹಾಕಲ್ಪಟ್ಟಿರುವ ಸ್ಥಳದಿಂದ ಮೊದಲು ಮಾಡಿ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತೆ; ಫರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿವಳಗೆ ಕ್ರಮಶಃ ಸಂಖೆಹಾಕಲ್ಪಟ್ಟಿರುತ್ತೆ. ಎಡಗಡೆ ಇಂದ ಬಲಗಡೆಗೆ ಹೋಗಲು (ಫೆಡಿಯಾರದ ಮುಳ್ಳುಗಳೋಪಾದಿಯಲ್ಲಿ) ಡಿಮಾರ್ಕೇರ್ಷ ಲೈನಿನ ಎಡಭಾಗದಲ್ಲಿ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜಮೀರ್ಗಳು ಇರುತ್ತವೆ:—

ಫಾರೆಸ್ಟಿನ ಉತ್ತರಕ್ಕೆ.

1 ದೇವರಹಳ್ಳಿ
2 ಮರ್ಲವಾಡಿ
3 ಯಲಜವಾಡಿ
4 ವಾನಪಟ್ಣ

ಫಾರೆಸ್ಟಿನ ಪೂರ್ವಕ್ಕೆ.

1 ಕುಂಬಣೀಪೇಮೆ ಸರಹದ್ದು
2 ತೇರಬೀದಿ
3 ಕಾಡಶೆವನಹಳ್ಳಿ

ಫಾರೆಸ್ಟಿನ ದಕ್ಷಿಣಕ್ಕೆ.

1 ತಿಪ್ಪೂರು
2 ಗುಳಗನಹಳ್ಳಿ
3 ಹೇರಿಂಡ್ಯಾವನಹಳ್ಳಿ
4 ಹಂಬಿಗುಳಿ
5 ಕೆಣರೆ
6 ಗೊಲ್ಲಹಳ್ಳಿ
7 ಬನ್ನಹಳ್ಳಿದೊಡ್ಡಿ
8 ದೊಡ್ಡಗುಳಿ
9 ಅರಕೆರೆ

ಫಾರೆಸ್ಟಿನ ಪಶ್ಚಿಮಕ್ಕೆ.

1 ನಾರಳಾಪುರ
2 ಗೊಲ್ಲಹಳ್ಳಿ
3 ಕೆರೆಅರಳಾಳುಸಂದ್ರ
4 ಗವ್ವಡನಹಳ್ಳಿ
5 ಮಾವತ್ತೂರು
6 ಜೋಡಿ ಬಾಚಹಳ್ಳಿ
7 ಮಣಿಯಂಬಾಳು
8 ತೋಕಸಂದ್ರ

ಈ ಫಾರೆಸ್ಟಿನಲ್ಲಿ ಸುಂದಫಟ್ಟು ಮತ್ತು ಬೆಟ್ಟಗವ್ವಡನ ದೊಡ್ಡಿ ಎಂಬ ಗ್ರಾಮಗಳು ಆವರಣ ದೇಖಿಲ್ ಸೇರಿ ಇವೆ. ಈ ಆವರಣಗಳು 6 ಅಡಿ ಅಗಲವುಳ್ಳ ಸಾಧಾರಣವಾದ ಡಿಮಾರ್ಕೇಷನ್ ಲೈನಿನಿಂದ ಗುರ್ತು ಮಾಡಲ್ಪಟ್ಟಿವೆ.

ಕುಂಬಳಗೋಡು ಫಾರೆಸ್ಟು.

ಕುಂಬಳಗೋಡ ಫಾರೆಸ್ಟು ಎಂದೇ ತಾಕ್ ಆಗಿರುತ್ತದೆ. ಇದರ ಸುತ್ತಲೂ 22 ಗಜಕ್ಕೆ ಸಮವಾದ ಅರಾವ್ ಮಾಡಲ್ಪಟ್ಟು ಗಂಟರ್ ಯುವರ ಎಂದು ಸಂಕಲಿ ಅಗಲದ ಡಿಮಾರ್ಕೇಷನ್ ಲೈನ್ ಹಾಕಲ್ಪಟ್ಟಿರುತ್ತೆ. ಈ ಲೈನಿನ ಫಾಸಲೆಯು 10 ಮೈಲಿ, 7 ಫರಲಾಂಗ್, 210 ಗಜಗಳು ಇರುತ್ತೆ; ಈ ಲೈನಿನಲ್ಲಿ ಕೊನೆವರಿಗೂ ಭೂಮಿ ಮೇಲೆ 5 ಅಡಿ ಎತ್ತರವುಳ್ಳ ದೊಡ್ಡ ಮೈಲಿ ಕಲ್ಲುಗಳಿಂದಲೂ ಹಿಂದು ಅಡಿ ಎತ್ತರವುಳ್ಳ ಸಣ್ಣ ಫರಲಾಂಗ್ ಕಲ್ಲುಗಳಿಂದಲೂ ಗುರ್ತು ಮಾಡಲ್ಪಟ್ಟಿದೆ. ಮೈಲಿ ಕಲ್ಲುಗಳು ಬನ್ನೀಕುಪ್ಪೆ ಭಂಡಿಜಾಡಿನಿಂದ 9 ಸಂಕಲಿ ಫಾಸಲೆ ಯಿರುವ ಜಾಡೇನಹಳ್ಳಿ ಹಳ್ಳದ ಎಡಭಾಗದ ಬಂಡೆಯಿಂದ ಮೊದಲು ಮಾಡಿ ಕ್ರಮಶಃ ಸಂಖೆ ಹಾಕಲ್ಪಟ್ಟಿವೆ; ಪರ್‌ಲಾಂಗ್ ಕಲ್ಲುಗಳು ಪ್ರತಿ ಮೈಲಿವಳಗೆ ಕ್ರಮಶಃ ಸಂಖೆ ಹಾಕಲ್ಪಟ್ಟಿರುತ್ತವೆ. ಎಜಗಡೆಯಿಂದ ಬಲಗಡೆಗೆ ಹೋಗಲು (ಫಡಿಯಾರದ ಮುಳ್ಳುಗಳೋಪಾದಿಯಲ್ಲಿ) ಡಿಮಾರ್ಕೇಷನ್ ಲೈನಿನ ಎಡಭಾಗದಲ್ಲಿ ಇದರಡೀ ಕಂಡ ಗ್ರಾಮಗಳು ಯಾ ಮುಖ್ಯವಾದ ಜವಿನುಗಳು ಇರುತ್ತವೆ :—

ಫಾರೆಸ್ಟಿನ ಉತ್ತರಗಲ್ಲಿ.

1 ಕೊಲೂರು
2 ತಿರುಮಲೀಕಟ್ಟೆ
3 ಚಿಕ್ಕೊಲೂರು
4 ಚನ್ನಮುತ್ತನಕೆರೆ.
5 ಕುಂಬಳಗೋಡು

ಫಾರೆಸ್ಟಿನ ಪೂರ್ವದಲ್ಲಿ.

1 ಕಣ್ಮಿಣಿಕಿ
2 13ನೇ ಮೈಲಿ ಕಲ್ಲಿನ ರೆಯಿಲ್ ರಸ್ತೆಭಾಗ
3 ಚಿಕ್ಕತಿಮ್ಮಯ್ಯನ ಕಟ್ಟೆ
4 ಹೆಜ್ಜಾಲ
5 ಹೊಲೇನಕಟ್ಟೆ
6 ವ್ಯಾವೇಲಿಂಗನ ಪಾಳ್ಯ
7 ಕುಚ್ಚೆಗವ್ವಡನ ಪಾಳ್ಯ
8 ಫುಂಚಿನಾಯಿಕನಹಳ್ಳಿ

ಘಾರೆಸ್ಟಿನ ದಕ್ಷಣದಲ್ಲಿ.

1 ಲಕ್ಷ್ಮೀಸಾಗರ
2 ಲಕ್ಷ್ಮೀಸಾಗರ ಕೆರೆ

ಘಾರೆಸ್ಟಿನ ಪಶ್ಚಿಮದಲ್ಲಿ.

1 ವಾಜರಹಳ್ಳಿ
2 ಕರೇಹನುಮೇಗವ್ವಡನ ಕಟ್ಟೆ
3 ಜಡೇನಹಳ್ಳಿ
4 ಬನ್ನಿಕಟ್ಟೆ
5 ಕರೇನಹಳ್ಳಿ

ತಾರೀಖು 24ನೇ ಏಪ್ರೆಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನೆಂದರೆ, ಶಿವಮೊಗ್ಗ ವ ಕಡೂರು ಡಿಸ್ಟ್ರಿಕ್ಟು ವೃತ್ತೀ ಬಾಬತು ಇದರಡೀ ಕಂಡ ನಾಟೂಗಳು ಅಸಿಸ್ಟೆಂಟ್ ಕನಸರವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು:—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.	ತೇಗದ ದಿಮ್ಮಿಗಳು.	ಕಾಡುಮರದ ದಿಮ್ಮಿಗಳು.	ತೇಗವಲ್ಲದ ಕಾಡುಮರದ ಕೊಡಚಿಗಳು.	ಟೋಟಲ್
ಸೊರಬ	(ಸೊರಬ ತಾಲ್ಲೂಕು)	10ನೇ ಮೇ 1884.	0	10	50	60
ಕೆರೆಹಳ್ಳಿ	ಡಿಟೋ	13 ಡಿಟೋ	15	50	200	265
ತೆಲಗದ್ದೆ	ಡಿಟೋ	15 ಡಿಟೋ	100	0	175	275
ಶಿರಾಳಕೊಪ್ಪ	(ಶಿಕಾರಿಪುರ ತಾಲ್ಲೂಕು)	19 ಡಿಟೋ	10	200	200	410
ತುಂಬಿನಕಟ್ಟೆ	ಡಿಟೋ	21 ಡಿಟೋ	0	0	300	300
ಶಿಕಾರಿಪುರ	ಡಿಟೋ	23 ಡಿಟೋ	0	10	200	210
ಹೊಸೂರು	ಡಿಟೋ	26 ಡಿಟೋ	0	0	400	400
ಚಿಕ್ಕಹಲವನ	(ಹೊನ್ನಾಳಿ ತಾಲ್ಲೂಕು)	29 ಡಿಟೋ	0	19	22	41
ಚನ್ನಗಿರಿ	(ಚನ್ನಗಿರಿ ತಾಲ್ಲೂಕು)	6ನೇ ಜೂನ್ 1884.	50	0	400	450
ಕುಂಟನಮಡು	(ತರೀಕೆರೆ ತಾಲ್ಲೂಕು)	11 ಡಿಟೋ	0	0	100	100
ತರೀಕೆರೆ	ಡಿಟೋ	13 ಡಿಟೋ	50	50	100	200
ಲಕ್ಕುವಳ್ಳಿ	ಡಿಟೋ	16 ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು)	20 ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು)	23 ಡಿಟೋ	50	150	100	300
ಶಿವಮೊಗ್ಗಾ	ಡಿಟೋ	25 ಡಿಟೋ	150	350	600	1100

ಹರಾಜಿನ ಷರತ್ತುಗಳು.—ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 29ನೇ ಏಪ್ರಲ್ 1884.

ನಂ. 13.—ತುಮಕೂರು ಡಿಸ್ಟ್ರಿಕ್ಟು ಹುಳಿಯಾರ್ ಡೆಪ್ಯುಟಿ ಅಮಲ್‌ದಾರ್ ಶ್ರೀನಿವಾಸರಾಯರಿಗೆ, ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಾಗಾಯತು ಒಂದೂವರೇ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 14.—ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್‌ದಾರ್ ವಿ. ರ್ಯ. ಗೋಪಾಲಯ್ಯಂಗಾರ್ರಿಗೆ, ಅವರು ಉಪಯೋಗಿಸಿಕ್ಕೊಳ್ಳಬಹುದಾದ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಚೆನ್ನಪಟ್ಟಣದ ಡೆಪ್ಯೂಟಿ ಅಮಲ್ದಾರ್ ಕೃಷ್ಣಪ್ಪನವರು, ಸದರೀ ಗೋಪಾಲಯ್ಯಂಗಾರ್ರ ಗೈರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ನೆಲಮಂಗಲದ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ರಾಡಲ್ಪಟ್ಟರುತ್ತಾರೆ.

ಶ್ರೀರಂಗಪಟ್ಟಣದ ಪೊಲೀಸ್ ಇನ್ಸ್ಪೆಕ್ಟರ್ ರಾಮಂಣನವರು, ಸದರೀ ಕೃಷ್ಣಪ್ಪನವರ ಗೈರ್ ಹಾಜರೀಯಲ್ಲಿ, ಚೆನ್ನಪಟ್ಟಣದ ಎರಡನೇ ಕ್ಲಾಸ್ ಡೆಪ್ಯೂಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ತಾರೀಖು 1ನೇ ಮೇ 1884.

ನಂ. 15.—ಮೈಸೂರು ಸಬಾರ್ಡಿನೇಟ್ ಜಡ್ಜ್ ಮೆ॥ ಎ. ರಂಗಸ್ವಾಮಯ್ಯಂಗಾರ್ರು, ಮೈಸೂರು ಗವರ್ಮೆಂಟಿನ ಅಸಿಸ್ಟೆಂಟ್ ಕಂಪ್ಟ್ರೋಲರಾಗಿ ಮೊಕರರ್ರಾಡಲ್ಪಟ್ಟರುತ್ತಾರೆ.

ತಾರೀಖು 2ನೇ ಮೇ 1884.

ನಂ. 16.—ತುಮಕೂರು ಡಿಸ್ಟ್ರಿಕ್ಟು, ಮದ್ದಗಿರಿ ತಾಲ್ಲೂಕು ಕೊರಟಿಗೆರೆ ಡೆಪ್ಯೂಟಿ ಅಮಲ್ದಾರ್ ಜಿ. ತಿರುನಾರಣೈಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಲಾಗಾಯತು ಸ್ವಂತ ಕೆಲಸದ ಮೇಲೆ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಮದ್ದಗಿರಿ ತಾಲ್ಲೂಕು ಪೊಲೀಸ್ ಇನ್ಸ್ಪೆಕ್ಟರ್ ಶಾಮರಾಯರು, ಸದರೀ ತಿರುನಾರಣಯ್ಯಂಗಾರ್ರ ಗೈರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಕೊರಟಿಗೆರೆ ಡೆಪ್ಯೂಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ರಾಡಲ್ಪಟ್ಟಿರುತ್ತಾರೆ.

ನಂ. 17.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 335ನೇ ಸೆಕ್ಷನ್ ನಿಯಮವನ್ನನುಸರಿಸಿ ಇದರಡಿ ಕಂಡ ಮಾಜಿಸ್ಟ್ರೇಟ್‌ಗಳು, ಫಿರ್ಯಾದಿಗಳ ವ ಸಾಕ್ಷಿಗಳ ಸಾಕ್ಷ್ಯವನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರಿ ತೆಗದುಕೊಳ್ಳುವಂತೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ:—

ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ವೆಂಕಟವರದಯ್ಯಂಗಾರ್ರು.

ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಆಕ್ಟಿಂಗ್ ಡೆಪ್ಯೂಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಜೆ. ಎಂ. ಡಿಸಾಜಾ ಯವರು.

ನಂ. 18.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 335ನೇ ಸೆಕ್ಷನ್ ನಿಯಮವನ್ನನುಸರಿಸಿ ಷಿಕಾರಿಪುರದ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ನಾರಣಾಚಾರ್ರು, ಫಿರ್ಯಾದಿಗಳ ವ ಸಾಕ್ಷಿಗಳ ಸಾಕ್ಷ್ಯವನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳುವಂತೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ನಂ. 19.—ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಚಲುವಯ್ಯಂಗಾರ್ರಿಗೆ, ಡೆಪ್ಯೂಟಿ ಕಮ್ಮಿಷನರಿಂದ ಉಪಯೋಗಿಸಿಕೊಳ್ಳಬಹುದೆಂದು ಅಪ್ಪಣೆ ಕೊಡಬಹುದಾದ ತಾರೀಖು ಲಾಗಾಯತು ಎಂಟು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ನುಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜಿದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ ಹುಕ್ಕುಂ,

ಆರ್. ವಿಜಯೊಂದ್ರರಾವ್,
ಸೆಕ್ರಟೇರಿ.